# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 928 (1080) |
| ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12.03.2026 |
| ಉತ್ತರಿಸಬೇಕಾದ ಸಚಿವರು | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |
| ಪ್ರಶ್ನೆ | ಉತ್ತರ |
| (ಅ) 2030ರ ವೇಳೆಗೆ ಬೆಂಗಳೂರನ್ನು ಹೊರತುಪಡಿಸಿ 10,000 ನವೋದ್ಯಮಗಳನ್ನು ರಚಿಸುವ ಗುರಿಯೊಂದಿಗೆ, 2025-26ರ ಆರ್ಥಿಕ ವರ್ಷದಲ್ಲಿ ಟೈಯರ್ 2 ಮತ್ತು ಟೈಯರ್ 3 ನಗರಗಳಲ್ಲಿ (ಮೈಸೂರು, ಹುಬ್ಬಳ್ಳಿ, ಕಲಬುರಗಿ) ಎಷ್ಟು ನವೋದ್ಯಮಗಳು ನೋಂದಣಿ ಆಗಿವೆ; ಮತ್ತು ಈ ನವೋದ್ಯಮಗಳಿಗೆ ಎಷ್ಟು ಅನುದಾನ ಹಂಚಿಕೆ ಮಾಡಲಾಗಿದೆ; | 2030ರ ವೇಳೆಗೆ ಬೆಂಗಳೂರನ್ನು ಹೊರತುಪಡಿಸಿ 10,000 ನವೋದ್ಯಮಗಳನ್ನು ರಚಿಸುವ ಗುರಿಯೊಂದಿಗೆ 2025-26ರ ಆರ್ಥಿಕ ವರ್ಷದಲ್ಲಿ ಟೈಯರ್ 2 ಮತ್ತು ಟೈಯರ್ 3 ನಗರಗಳಲ್ಲಿ (ಮೈಸೂರು, ಹುಬ್ಬಳ್ಳಿ, ಕಲಬುರಗಿ) ಒಟ್ಟು 122 ನವೋದ್ಯಮಗಳು ನೋಂದಣಿ ಆಗಿವೆ.<br>ಎಲಿವೇಟ್ ಯೋಜನೆ ಅಡಿಯಲ್ಲಿ ಮೇಲ್ಕಾಣಿಸಿದ 22 ನವೋದ್ಯಮಗಳಿಗೆ ಒಟ್ಟು ರೂ. 5 . 5 3 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ. |
| (ಆ) ಮೈಸೂರು ಜಿಲ್ಲೆಯಲ್ಲಿ 150 ಎಕರೆ ಜಾಗದಲ್ಲಿ ಪಿ.ಸಿ.ಬಿ (Printed Circuit Board) ಪಾರ್ಕ್ ಸ್ಥಾಪನೆ ಮತ್ತು ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳನ್ನು Global Innovation Districts ಗಳನ್ನಾಗಿ ಮಾಡುವ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ; | ಮೈಸೂರು ಜಿಲ್ಲೆಯ ಕೋಚನಹಳ್ಳಿ ಹಂತ- 2ರಲ್ಲಿ ಪಿಸಿಬಿ (Printed Circuit Board) ಪಾರ್ಕ್ ಅನ್ನು ಸ್ಥಾಪಿಸಲು ಕೆಐಎಡಿಬಿ (KIADB) ಸಂಸ್ಥೆಯಿಂದ 150 ಎಕರೆ ಭೂಮಿಯನ್ನು ಗುರುತಿಸಿ ಮೀಸಲಿಡಲಾಗಿದೆ.<br>ಬೆಳಗಾವಿಯಲ್ಲಿ GID ಸ್ಥಾಪಿಸುವ ಸಂಬಂಧ ತಿಲಕವಾಡಿಯಲ್ಲಿರುವ ಕಲಾಮಂದಿರ ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸುವಂತೆ ಜಿಲ್ಲಾಧಿಕಾರಿ, ಬೆಳಗಾವಿ, ಇವರಿಗೆ ಮನವಿ ಮಾಡಲಾಗಿದೆ.<br>ಮುಂದುವರೆದು, ಧಾರವಾಡದಲ್ಲಿ ಈ ಕೆಳಕಂಡ ಕಾರ್ಯಕ್ರಮ/ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ:-<br>• **ಇನ್ನೋವೇಶನ್ ಲ್ಯಾಬ್ (Innovation Labs):** ಲೀಪ್ (Local Economy Accelerator Program) ಯೋಜನೆ ಅಡಿಯಲ್ಲಿ ಕೃಷಿ ವಿಶ್ವವಿದ್ಯಾಲಯ (University of Agricultural Sciences), ಧಾರವಾಡ ಜಿಲ್ಲೆಯಲ್ಲಿ 'ಇನ್ನೋವೇಶನ್ ಲ್ಯಾಬ್' ಮೂಲಕ ನವೋದ್ಯಮಗಳಿಗೆ ಬೆಂಬಲ ನೀಡಲಾಗುತ್ತಿದೆ.<br>• **ಸಿಒಇ-ಡೆಫ್‌ಟ್ರಾನಿಕ್ಸ್ (CoE Deftronics):** |

| | |
|---|---|
| | Centre of Excellence ಅಡಿಯಲ್ಲಿ, 'ಧರ್ತಿ' (dhaRti) ಫೌಂಡೇಶನ್, ಐಐಟಿ (IIT) ಧಾರವಾಡದ ಸಹಯೋಗದೊಂದಿಗೆ 'ಡೆಫ್‌ಟ್ರಾನಿಕ್ಸ್' (Deftronics) ಎಂಬ ರಕ್ಷಣಾ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗಿರುತ್ತದೆ. ಈ ಕೇಂದ್ರವು ಹುಬ್ಬಳ್ಳಿ-ಧಾರವಾಡ ಭಾಗದ ನವೋದ್ಯಮಗಳಿಗೆ ಬೆಂಬಲ ನೀಡಲಿದೆ. ಇದು ಪ್ರಯೋಗಾಲಯದ ಮೂಲಸೌಕರ್ಯ, ಮಾರುಕಟ್ಟೆ ಪ್ರವೇಶ, ಮಾರ್ಗದರ್ಶನ ಮತ್ತು ಇನ್‌ಕ್ಯುಬೇಶನ್ (Incubation) ಸೌಲಭ್ಯಗಳನ್ನು ನವೋದ್ಯಮಿಗಳಿಗೆ ಒದಗಿಸುತ್ತದೆ.<br>• **ಸಿಒಇ-ಕ್ವಾಂಟಮ್ ಇನ್ನೋವೇಶನ್ ಮತ್ತು ಕಂಪ್ಯೂಟಿಂಗ್ (CoE-QAIC):** ಐಐಐಟಿ (IIIT) ಧಾರವಾಡದ ಸಹಯೋಗದೊಂದಿಗೆ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಸದರಿ ಕೇಂದ್ರವು ಪ್ರಯೋಗಾಲಯದ ಮೂಲಸೌಕರ್ಯ, ಮಾರುಕಟ್ಟೆ ಪ್ರವೇಶ, ಮಾರ್ಗದರ್ಶನ ಮತ್ತು ಇನ್‌ಕ್ಯುಬೇಶನ್ ಬೆಂಬಲವನ್ನು ನೀಡುವ ಮೂಲಕ ಸ್ಟಾರ್ಟ್‌ಅಪ್‌ಗಳಿಗೆ ಸಹಾಯ ನೀಡಲಾಗುವುದು. |
| (ಇ) 2025-26ನೇ ಸಾಲಿನಲ್ಲಿ ಹಂಚಿಕೆ ಮಾಡಲಾದ ಮತ್ತು IISc ಸಂಸ್ಥೆಯ ಸಹಯೋಗದೊಂದಿಗೆ ರಾಜ್ಯದಲ್ಲಿ ಕ್ವಾಂಟಮ್ ರಿಸರ್ಚ್ ಪಾರ್ಕ್ ಹಂತ-2ನ್ನು ನಿರ್ಮಿಸುವ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ ಮಾಹಿತಿ ನೀಡುವುದು? | 2025-26ನೇ ಸಾಲಿನಲ್ಲಿ ಹಂಚಿಕೆ ಮಾಡಲಾದ ಮತ್ತು IISc ಸಂಸ್ಥೆಯ ಸಹಯೋಗದೊಂದಿಗೆ ರಾಜ್ಯದಲ್ಲಿ ಕ್ವಾಂಟಮ್ ರಿಸರ್ಚ್ ಪಾರ್ಕ್ ಹಂತ-2ನ್ನು ನಿರ್ಮಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ:ಐಟಿಬಿಟಿ 46 ಎಡಿಎಂ 2025, ದಿನಾಂಕ:23.06.2025ರಲ್ಲಿ 3.5 ವರ್ಷಗಳ ಅವಧಿಗೆ ರೂ. 48.00 ಕೋಟಿಗಳ ಅನುದಾನದೊಂದಿಗೆ ಅನುಮೋದಿಸಲಾಗಿದೆ ಮತ್ತು ದಿನಾಂಕ: 29.09.2025 ರಂದು KITS ಮತ್ತು Foundation for Science Innovation and Development (FSID), IISc ರವರೊಂದಿಗೆ ಕರಾರು ಒಪ್ಪಂದವನ್ನು ಸಹಿ ಮಾಡಲಾಗಿರುತ್ತದೆ ಹಾಗೂ ದಿನಾಂಕ:30.10.2025 ರಂದು ರೂ.5.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. |

(ಐಟಿಬಿಟಿ 17 ಎಲ್‌ಸಿಎಂ 2026)

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.